# ಗದ್ಯಪಾಠ – 13 ಅಂತಿಮ ವಿದಾಯ

## ಅಭ್ಯಾಸ

(ಅ) ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1. ವೈದ್ಯರ ನಡಿಗೆಯಲ್ಲಿ ಧಾವಂತವಿತ್ತು ಏಕೆ?

ಉ: ರೋಗಿಯೊಬ್ಬನನ್ನು ಉಳಿಸಲು ತನ್ನಿಂದಾಗಿ ತಡವಾಗುತ್ತಿದೆಯಲ್ಲಾ ಎಂಬ ತಳಮಳವಿತ್ತು.

2. ಆಪರೇಷನ್ ಕೊಠಡಿಯ ಬಳಿ ಇದ್ದ ತಂದೆಯ ಮುಖದಲ್ಲಿ ಯಾವ ಆತಂಕವಿತ್ತು?

ಉ: ಒಳಗೆ ಮಲಗಿರುವ ತನ್ನ ಮಗನಿಗೆ ಏನಾಗಿ ಬಿಡುತ್ತೋ ಮತ್ತೆ ಆತನನ್ನು ಜೀವಂತವಾಗಿ ನೋಡುತ್ತೇನೋ ಇಲ್ಲವೋ ಎಂಬ ಆತಂಕ ತಂದೆಯ ಮುಖದಲ್ಲಿತ್ತು.

3. ಸಾವಿನ ಬಗ್ಗೆ ವೈದ್ಯರು ಏನೆಂದು ಹೇಳಿದರು?

ಉ: ವೈದ್ಯರಾದವರು ಸಾವನ್ನು ಮುಂದೂಡಬಹುದೇ ವಿನಾ ಸಾವಿನಿಂದ ಸಂಪೂರ್ಣವಾಗಿ ಬಚಾವು ಮಾಡುವ ಶಕ್ತಿ ನಮಗೂ ಇಲ್ಲ ಎಂದು ಹೇಳಿದರು.

4. ವ್ಯಕ್ತಿಗೆ ಕಷ್ಟದ ಭಾರ ಅರ್ಥವಾಗುವುದು ಯಾವಾಗ?

ಉ: "ನಾವು ಆ ಕಷ್ಟದ ಭಾಗವಾಗದೇ ಇದ್ದಾಗ ಅದಕ್ಕೆ ಸಾಂತ್ವನ ಹೇಳೋದು ತುಂಭಾ ಸುಲಭ ನಾವೇ ಆ ಕಷ್ಟಕ್ಕೆ ಸಿಲುಕಿದಾಗ ಅದರ ಭಾರ ಅರ್ಥವಾಗೋದು.

5. ವೈದ್ಯರು ಆಪರೇಷನ್ ಮುಗಿಸಿ ಅವಸರದಿಂದ ಮನೆಗೆ ತೆರಳಿದ್ದು ಏಕೆ?

ಉ: ವೈದ್ಯರು ಅಪರೇಷನ್ ಮುಗಿಸಿ ತಮ್ಮ ಮಗನ ಅಂತಿಮ ವಿದಾಯಕ್ಕೆ ತೆರಳಿದರು.

(ಆ) ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಆಪರೇಷನ್ ಥಿಯೇಟರ್‌ನತ್ತ ದೌಡಾಯಿಸಿದ ವೈದ್ಯನ ಮೇಲೆ ರೋಗಿಯ ತಂದೆ ಏನೆಂದು ಹರಿಹಾಯ್ದನು?

ಉ. ಆಪರೇಷನ್ ಥಿಯೇಟರ್‌ನತ್ತ ದೌಡಾಯಿಸುತ್ತಿರುವ ವೈದ್ಯನನ್ನು ಕಾಣುತ್ತಿದ್ದಂತೆಯೇ ಅವನೆಲ್ಲಾ ಅಸಹನೆಯ ಕಟ್ಟೆಯೊಡೆಯಿತು. "ಇಲ್ಲಿಗೆ ಬರುವುದಕ್ಕೆ ನಿಮಗೆ ಇಷ್ಟೋತ್ತು ಬೇಕಾಯಿತೆ? ನನ್ನ ಮಗನ ಜೀವ ಅಪಾಯದಲ್ಲಿದೆಯೆಂಬುದು ನಿಮಗೆ ಗೊತ್ತಿಲ್ಲವೇ? ನಿಮಗೆ ಕಿಂಚಿತ್ತಾದರು ಜವಾಬ್ದಾರಿ ಎನ್ನುವುದಿಲ್ಲವೇ?" ತನ್ನೆಲ್ಲಾ ಆಕ್ರೋಶಕ್ಕೆ ಮಾತಿನ ರೂಪ ಕೊಟ್ಟು ವೈದ್ಯನ ಮೇಲೆ ಹರಿಹಾಯ್ದೆ.

2. ವೈದ್ಯರು ಆಕ್ರೋಶದಲ್ಲಿದ್ದ ರೋಗಿಯ ತಂದೆಯನ್ನು ಏನೆಂದು ವಿನಂತಿಸಿಕೊಂಡರು?

ಉ: "ದಯವಿಟ್ಟು ಕ್ಷಮಿಸಪ್ಪ ನಾನು ಆಸ್ಪತ್ರೆಯಲ್ಲಿ ಇರಲಿಲ್ಲ ನನಗೆ ಪೋನ್ ಬರುತ್ತಿದ್ದಂತೆಯೇ ಹೊರಟು ಬಂದಿದ್ದೇನೆ. ದಯಮಾಡಿ ನೀನೀಗ ಸ್ವಲ್ಪ ಶಾಂತನಾಗು ನನ್ನ ಕೆಲಸ ಮಾಡಲು ಅನವು ಮಾಡಿಕೊಡು ಈಗಾಗಲೇ ತಡವಾಗಿ ಹೋಗಿದೆ. ಕ್ಷಮೆಯಿರಲಿ ನಗುವಿನೊಂದಿಗೆ ವೈದ್ಯರು ವಿನಂತಿಸಿಕೊಂಡರು.

3. ವೈದ್ಯರು ರೋಗಿಯ ತಂದೆಗೆ ಏನೆಂದು ರೋಗಿಯ ತಂದೆಗೆ ಏನೆಂದು ಹೇಳಿದರು?

ಉ: "ಒಬ್ಬ ವೈದ್ಯನಾಗಿ ನಾನು ಏನು ಮಾಡಬಲ್ಲೆನೋ ಅದನ್ನು ಪ್ರಾಮಾಣಿಕವಾಗಿ ಮಾಡುತ್ತೇ ನಿನ್ನ ಮಗನನ್ನು ಉಳಿಸಲು ನನ್ನೆಲ್ಲಾ ಸಾಮರ್ಥ್ಯವನ್ನೆ ಪಣಕ್ಕಿಡುತ್ತೇನೆ, ಆದರೆ ನಮ್ಮೆಲ್ಲಾ ಮೀರಿದ ಶಕ್ತಿಯ ಮುಂದೆ ನಮ್ಮ ಆಟವೇನೂ ನಡೆಯಾದು ವೈದ್ಯರಾದವರು ಸಾವನ್ನು ಮುಂದಿಡಬಹುದೆ ವಿನಾ ಸಾವಿನಿಂದ ಸಂಪೂರ್ಣವಾಗಿ ಬಚಾವು ಮಾಡುವ ಶಕ್ತಿ ನಮಗೂ ಇಲ್ಲ ಈಗ ಹೋಗಿ ಆ ದೇವರ ಬಳಿ ನಿನ್ನ ಮಗನನ್ನು ಉಳಿಸಿಕೊಡುವಂತೆ ಬೇಡಿಕೋ ಎಂದು ಭರವಸೆ ನೀಡಿದರು.

4. ಆಪರೇಷನ್ ಮುಗಿಸಿದ ವೈದ್ಯರು ರೋಗಿಯ ತಂದೆಗೆ ಏನೆಂದು ಹೇಳಿದರು?

ಉ: ಆಪರೇಷನ್ ಮುಗಿಸಿದ ವೈದ್ಯರು ಆಪರೇಷನ್ ಯಶಸ್ವಿಯಾಗಿ ಮುಗಿದಿದೆ. ಈಗ ನಿನ್ನ ಮ... ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಅದೇನನ... ಹೇಳಬರುತ್ತಿದ್ದ ತಂದೆಯನ್ನು ತಡೆದು ವೈದ್ಯ... ಮಾತು ಮುಂದುವೆಸಿದ "ನೋಡು ಮತ್ತೇನಾ... ಕೇಳುವುದಿದ್ದರೆ ಸಿಸ್ಟರ್ ಬರುತ್ತಾರೆ ಅವರನ್ನೇ ಕೇ... ಎಂದವರೇ ಬಂದಷ್ಟೇ ಧಾವಂತದಲ್ಲಿ ಅಲ್ಲಿ... ಹೊರಟರು.

Scanned with CamScanner